# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/04/2016-17; ದಿನಾಂಕ: 11.08.2016

| ವಾದಿ | ಪ್ರತಿವಾದಿ |
| --- | --- |
| ಶ್ರೀಮತಿ ಸೆರೆಗಾರು ಲಕ್ಷ್ಮವ್ವ ಗಂಡ ಸೆರೆಗಾರು ಹನುಮಂತಪ್ಪ, ಹಂಪಾಪಟ್ಟಣ ಗ್ರಾಮ, ಹಗರಿಬೊಮ್ಮನಹಳ್ಳಿ(ತಾ) | 1.ಶೆರೆಗಾರು ಹನುಮಂತಪ್ಪ ತಂದೆ ಬಿದ್ದಹನುಮಂತಪ್ಪ<br>2.ಸೆರೆಗಾರು ನಾಗರಾಜ ತಂದೆ ಮಲ್ಲೆಪ್ಪ<br>ಹಂಪಾಪಟ್ಟಣ ಗ್ರಾಮ,ಹ.ಬೊ.ಹಳ್ಳಿ(ತಾ) |

<u>ಉಪಸ್ಥಿತರು</u>:**ಕೆ.ಬಿ.ಆನಂದಪ್ಪನಾಯಕ್**, ಕ.ಆ.ಸೇ

**ತಹಶೀಲ್ದಾರರು**

**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಹಂಪಾಪಟ್ಟಣ ಗ್ರಾಮದ ಸರ್ವೆ ನಂ.156/ಎಫ್ ಮತ್ತು ಸ.ನಂ.392/ಬಿ ಕ್ರಮವಾಗಿ ವಿ: 0.70, 0.82 ಎಕರೆ ಜಮೀನನ್ನು ದಿನಾಂಕ: 26.04.2016ರ ಪಾಲುವಿಭಾಗ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಾಪಟ್ಟಣ ಗ್ರಾಮದ ಸರ್ವೆ ನಂ.156/ಎಫ್ ಮತ್ತು ಸ.ನಂ.392/ಬಿ ಕ್ರಮವಾಗಿ ವಿ: 0.70, 0.82 ಎಕರೆ ಜಮೀನನನ್ನು ದಿನಾಂಕ:26.04.2016ರ ಪಾಲುವಿಭಾಗ ಪತ್ರದ ಪ್ರಕಾರ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ ಪ್ರತಿವಾದಿಗಳು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-54/2015-16;ದಿ: .06.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-28.07.2016ರಂದು ವಿಚಾರಣೆಗೆ ಹಾಜರಾಗುವಂತೆ ಉಭಯರಿಗೆ ನೋಟಿಸ್ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು, ವಿಚಾರಣೆಗೆ ವಾದಿ ಗೈರು ಹಾಜರಾಗಿರುತ್ತಾರೆ, ಪ್ರತಿವಾದಿಗಳು ಹಾಜರಾಗಿರುತ್ತಾರೆ.

ವಿಚಾರಣೆಗೆ ಹಾಜರಾದ 02ನೇ ಪ್ರತಿವಾದಿಯನ್ನು ತಕರಾರು ಅರ್ಜಿ ಕುರಿತು ವಿಚಾರಣೆ ಮಾಡಲಾಗಿ,ವಿವಾದಿತ ಜಮೀನು ತನ್ನ ಅಜ್ಜನಾದ ಶೆರೆಗಾರು ಹನುಮಂತ ಇವರ ಹೆಸರಿಗೆ ಹಕ್ಕು ದಾಖಲೆ ಇದ್ದು ಹಾಲಿ 01ನೇ ಪ್ರತಿವಾದಿಯು ತನ್ನ ಹೆಂಡತಿಯಾದ ವಾದಿಗೆ ಪಾಲುವಿಭಾಗ ಮಾಡಿಕೊಟ್ಟಿರುವುದು ತಪ್ಪು, ಆದ್ದರಿಂದ ಹಕ್ಕುಬದಲಾವಣೆ ಕೋರಿಕೆ ಅರ್ಜಿಯನ್ನು ತಿರಸ್ಕರಿಸುವಂತೆ ವಾದಿಸಿರುತ್ತಾರೆ, ಈ ಬಗ್ಗೆ 01ನೇ ಪ್ರತಿವಾದಿಯು ಸಹಾ ಒಪ್ಪಿಕೊಂಡಿರುತ್ತಾರೆ.

ವಾದಿಯ ಕೋರಿಕೆ ಅರ್ಜಿ ಮತ್ತು ಪ್ರತಿವಾದಿಗಳು ವಿಚಾರಣೆಯಲ್ಲಿ ನೀಡಿದ ಮೌಖಿಕ ಹೇಳಿಕೆಯನ್ವಯ ದಾಖಲೆಗಳನ್ನು ಪರಿಶೀಲಿಸಲಾಗಿ,

1. ವಿವಾದಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ ಶೆರೆಗಾರು ಹನುಮಂತ ಹೆಸರಿನಲ್ಲಿ ಹಕ್ಕುದಾಖಲೆ ಇರುತ್ತದೆ, ಆದರೆ ಪಟ್ಟಾದಾರರ ತಂದೆ/ತಾಯಿಯ ಹೆಸರು ದಾಖಲಾಗಿರುವುದಿಲ್ಲಾ.
2. ವಾದಿಯು ಹಕ್ಕುಬದಲಾವಣೆ ಕೋರಿ ಸಲ್ಲಿಸಿರುವ ದಿನಾಂಕ:26.04.2016ರ ಪಾಲು ವಿಭಾಗ ಪತ್ರವು ನೋಂದಣಿ ಆಗಿರುವುದಿಲ್ಲಾ.
3. ವಿವಾದಿತ ಜಮೀನನ್ನು 01ನೇ ಪ್ರತಿವಾದಿಯು ತಪ್ಪಾಗಿ ತನ್ನ ಹೆಂಡತಿಗೆ ಪಾಲುವಿಭಾಗ ಮಾಡಿಕೊಟ್ಟಿರುತ್ತಾರೆ ಎಂದು ತಕರಾರುದಾರರಾದ 02ನೇ ಪ್ರತಿವಾದಿಯು ಮಾಡಿರುವ ಆರೋಪವನ್ನು 01ನೇ ಪ್ರತಿವಾದಿಯು ವಿಚಾರಣೆ ಸಮಯದಲ್ಲಿ ಒಪ್ಪಿಕೊಂಡಿರುತ್ತಾರೆ.

ಆದ್ದರಿಂದ ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಜಮೀನಿನ ವಿವಾದವು ಸಿವಿಲ್ ಸ್ವರೂಪದ್ದಾಗಿರುತ್ತದೆ, ಆದ್ದರಿಂದ ವಾದಿಗಳ ಕೋರಿಕೆಯನ್ನು ತಿರಸ್ಕರಿಸುತ್ತಾ ಉಭಯರು ವಿವಾದಿತ ಜಮೀನಿನಲ್ಲಿನ ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ನಿರ್ಧರಿಸಿಕೊಳ್ಳಬೇಕಾಗಿರುತ್ತದೆ, ಕಾರಣ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಹಂಪಾಪಟ್ಟಣ ಗ್ರಾಮದ ಸರ್ವೆ ನಂ.156/ಎಫ್ ಮತ್ತು ಸ.ನಂ.392/ಬಿ ಕ್ರಮವಾಗಿ ವಿ: 0.70, 0.82 ಎಕರೆ ಜಮೀನನ್ನು ನೊಂದಣಿಯಲ್ಲದ ಪಾಲುವಿಭಾಗದಂತೆ ಹಕ್ಕುಬದಲಾವಣೆ ಕೋರಿ ವಾದಿಯು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುತ್ತಾ, ಪಹಣಿ ದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಮತ್ತು ವಿವಾದಿತ ಜಮೀನಿನ ಹಕ್ಕನ್ನು ಉಭಯರು ಸಿವಿಲ್ ನ್ಯಾಯಾಲಯದಲ್ಲಿ ನಿರ್ಧರಿಸಿಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 11.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:

ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.